ಪ್ರಸಿದ್ಧ ಸಂಗೀತ ಆಶ್ರಮವಾದ ಶ್ರೀವಿರೇಶ್ವರ ಮೂಲಕ ಶೈಕ್ಷಣಿಕ ಅಭಿವೃದ್ಧಿ ಹೊಂದಲು ವಂ

# ವಿಕಲಾಂಗ ಚೇತನರಿಗೆ ಸಮಾಜ ಸದಾ ಸ್ಪಂದಿಸಬೇಕು: ಸಭಾಪತಿ ಬಸವರಾಜ್ ಹೊರಟ್ಟಿ




<u>ಕನ್ನಡ ಜನಶ್ರೀ ಸುದ್ದಿ ಜಾಲ</u>

ಧಾರವಾಡ.. ವಿಕಲಾಂಗ ಚೇತನರು ಈ ಸಮಾಜದ ಆಸ್ತಿ ಅವರಿಗೆ ಎಲ್ಲ ರೀತಿಯ ಗೌರವ ಸ್ಪಂದನೆ ಸಮಾಜದಿಂದ ಹೆಚ್ಚೆಚ್ಚು ಸಿಗಬೇಕಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಅಭಿಪ್ರಾಯಪಟ್ಟರು.

ಅವರು ಧಾರವಾಡದ "ಸಮರ್ಥನಂ ಅಂಗವಿಕಲ ಸಂಸ್ಥೆಯವತಿಯಿಂದ ಏರ್ಪಡಿಸಿದ "ಅಂತರಾಷ್ಟ್ರೀಯ ವಿಕಲಾಂಗ ಚೇತನರ ದಿನಾಚರಣೆ ಹಾಗೂ ಗುರುವಂದನಾ" ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಕಲಚೇತನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಡಿಸೆಂಬರ್ ಮೂರನ್ನು ಅಂತರರಾಷ್ಟ್ರೀಯ ವಿಕಲಾಂಗ ವ್ಯಕ್ತಿಗಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಈ ದಿನ ಇಡೀ ಜಗತ್ತಿನಾದ್ಯಂತ ವಿಕಲಚೇತನರ ಬಗ್ಗೆ ಚಿಂತನ ಮಂಥನ ನಡೆಯುವುದರ ಜೊತೆಗೆ ಅವರನ್ನು ಸಮಾಜದ ಮುಂಚೂಣಿಯಲ್ಲಿ ತರುವುದಕ್ಕಾಗಿ ಹತ್ತಾರು ಯೋಜನೆಗಳನ್ನ ರೂಪಿಸಲಾಗುತ್ತಿದೆ ಪ್ರತಿಯೊಂದು ದೇಶಗಳು ಈ ವ್ಯಕ್ತಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವರನ್ನು ಸಮರ್ಥರನ್ನಾಗಿ ಸಮುದಾಯದಲ್ಲಿ ಬಿಂಬಿಸುವ ಜೊತೆಗೆ ಅವರು ತಮ್ಮ ತಮ್ಮ ಬದುಕನ್ನ ಕಟ್ಟಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಾ ಬಂದಿದೆ ಇದರ ಸದುಪಯೋಗವನ್ನು ವಿಕಲಚೇತನರು ಮಾಡಿಕೊಳ್ಳಬೇಕು. ನಿಮ್ಮ ಜೊತೆ ಸಮಾಜ ನಾವು ಸದಾ ಇರುತ್ತೇವೆ ನಿಮಗೆ ಯಾವುದೇ ಕೀಳರಿಮೆ ಬೇಡ ಆ ದೇವರು ನಿಮಗೆ ವಿಶೇಷ ವ್ಯಕ್ತಿತ್ವವನ್ನು ಬುದ್ಧಿಯನ್ನು ಸಾಮರ್ಥ್ಯವನ್ನು ನೀಡಿರುತ್ತಾನೆ. ಜಗತ್ತಿನ ಬಹುತೇಕ ವಿಕಲಚೇತನ ಸಾಧಕರ ಬದುಕು ಅವರ ಸಾಧನೆ ಹಾದಿಯನ್ನು ತಾವು ಅರಿತುಕೊಳ್ಳಬೇಕು. ಅವರು ಸಾಗಿ ಬಂದ ಹೆಜ್ಜೆ ಗುರುತುಗಳನ್ನು ತಾವೊಮ್ಮೆ ಮೆಲಕು ಹಾಕಬೇಕು ಆವಾಗ ತಮಗೂ ಉತ್ತಮ ಬದುಕನ್ನ ಕಟ್ಟಿಕೊಳ್ಳುವ ಕನಸುಗಳು ಬೀಳುತ್ತವೆ. ಇಂತಹ ಕನಸನ್ನು ಕಾಣುವ ಬೀಜವನ್ನು ಸಮಾಜ ಬಿತ್ತಬೇಕಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿಮಗೆ ಮುಕ್ತವಾಗಿ ಭಾಗವಹಿಸಲು ಸಮಾಜ ಅವಕಾಶ ಕಲ್ಪಿಸಿದೆ. ತಾವು ವಿಶೇಷ ತರಬೇತಿ ಪಡೆದು ಸಾಧನೆಯನ್ನು ತಾವು ಮಾಡಿ ಬದುಕನ್ನ ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಆ ಹಿನ್ನೆಲೆಯಲ್ಲಿ ತಮ್ಮ ಸತತ ಪ್ರಯತ್ನ ಆಸಕ್ತಿ ಸಹ ಮುಖ್ಯ ಎಂದು ಹೇಳಿದರು. ತಮಗೆ ಏನೇ ಸಮಸ್ಯೆ ಆದರೂ ಸದಾಕಾಲ ನನ್ನ ಮನೆ ನಿಮಗೆ ತೆರೆದಿರುತ್ತದೆ ಜೊತೆಗೆ ನಾನು ನಿಮ್ಮೊಂದಿಗೆ ಇರುತ್ತೇನೆ ತಾವು ಭರವಸೆಯನ್ನ ಕಳೆದುಕೊಳ್ಳದೆ ಸುಂದರವಾಗಿ ಬದುಕುವ ಅವಕಾಶ ತಮ್ಮಲ್ಲಿಯೇ ಇದೆ ಆ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಸದಾ ಇರಲಿ ಎಂದು ಆಶಿಸುತ್ತೇನೆ. ಈ ಸಂದರ್ಭದಲ್ಲಿ ವಿಕಲಚೇತನ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಮರ್ಥನಂ ಅಂಗವಿಕಲ ಸಂಸ್ಥೆಯ ಸರ್ವ ಪದಾಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.

# ವಿಕಲಾಂಗ ಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರುವದವಶ್ಯ : ಹೊರಟ್ಟಿ




**ಧಾರವಾಡ :** ವಿಕಲಾಂಗ ಚೇತನರು ಈ ಸಮಾಜದ ಆಸ್ತಿ ಅವರಿಗೆ ಎಲ್ಲ ರೀತಿಯ ಗೌರವ ಸ್ಪಂದನೆ ಸಮಾಜದಿಂದ ಹೆಚ್ಚೆಚ್ಚು ಸಿಗಬೇಕಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಅಭಿಪ್ರಾಯಪಟ್ಟರು.

ಸಮರ್ಥನಂ ಅಂಗವಿಕಲ ಸಂಸ್ಥೆವತಿಯಿಂದ ಏರ್ಪಡಿಸಿದ ಅಂತರಾಷ್ಟ್ರೀಯ ವಿಕಲಾಂಗ ಚೇತನರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಕಲಚೇತನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಡಿಸೆಂಬರ್ 3ನ್ನು ಅಂತರರಾಷ್ಟ್ರೀಯ ವಿಕಲಾಂಗ ವ್ಯಕ್ತಿಗಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ ಈ ದಿನ ಇಡೀ ಜಗತ್ತಿನಾದ್ಯಂತ ವಿಕಲಚೇತನರ ಬಗ್ಗೆ ಚಿಂತನ ಮಂಥನ ನಡೆಯುವುದರ ಜೊತೆಗೆ ಅವರನ್ನು ಸಮಾಜದ ಮುಂಚೂಣಿಯಲ್ಲಿ ತರುವುದಕ್ಕಾಗಿ ಹತ್ತಾರು ಯೋಜನೆಗಳನ್ನ ರೂಪಿಸಲಾಗುತ್ತಿದೆ ಪ್ರತಿಯೊಂದು ದೇಶಗಳು ಈ ವ್ಯಕ್ತಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವರನ್ನು ಸಮರ್ಥರನ್ನಾಗಿ ಸಮುದಾಯದಲ್ಲಿ ಬಿಂಬಿಸುವ ಜೊತೆಗೆ ಅವರು ತಮ್ಮ ತಮ್ಮ ಬದುಕನ್ನ ಕಟ್ಟಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಾ ಬಂದಿದೆ ಇದರ ಸದುಪಯೋಗವನ್ನು ವಿಕಲಚೇತನರು ಮಾಡಿಕೊಳ್ಳಬೇಕು. ನಿಮ್ಮ ಜೊತೆ ಸಮಾಜ ನಾವು ಸದಾ ಇರುತ್ತೇವೆ ನಿಮಗೆ ಯಾವುದೇ ಕೀಳಿರಿಮೆ ಬೇಡ ಆ ದೇವರು ನಿಮಗೆ ವಿಶೇಷ ವ್ಯಕ್ತಿತ್ವವನ್ನು ಬುದ್ಧಿಯನ್ನು ಸಾಮರ್ಥ್ಯವನ್ನು ನೀಡಿರುತ್ತಾನೆ. ಜಗತ್ತಿನ ಬಹುತೇಕ ವಿಕಲಚೇತನ ಸಾಧಕರ ಬದುಕು ಅವರ ಸಾಧನೆ ಹಾದಿಯನ್ನು ತಾವು ಅರಿತುಕೊಳ್ಳಬೇಕು. ಅವರು ಸಾಗಿ ಬಂದ ಹೆಜ್ಜೆ ಗುರುತುಗಳನ್ನು ತಾವೊಮ್ಮೆ ಮೆಲಕು ಹಾಕಬೇಕು ಆವಾಗ ತಮಗೂ ಉತ್ತಮ ಬದುಕನ್ನ ಕಟ್ಟಿಕೊಳ್ಳುವ ಕನಸುಗಳು ಬೀಳುತ್ತವೆ. ಇಂತಹ ಕನಸನ್ನು ಕಾಣುವ ಬೀಜವನ್ನು ಸಮಾಜ ಬಿತ್ತಬೇಕಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿಮಗೆ ಮುಕ್ತವಾಗಿ ಭಾಗವಹಿಸಲು ಸಮಾಜ ಅವಕಾಶ ಕಲ್ಪಿಸಿದೆ. ತಾವು ವಿಶೇಷ ತರಬೇತಿ ಪಡೆದು ಸಾಧನೆಯನ್ನು ತಾವು ಮಾಡಿ ಬದುಕನ್ನ ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಆ ಹಿನ್ನೆಲೆಯಲ್ಲಿ ತಮ್ಮ ಸತತ ಪ್ರಯತ್ನ ಆಸಕ್ತಿ ಸಹ ಮುಖ್ಯ ಎಂದು ಹೇಳಿದರು. ತಮಗೆ ಏನೇ ಸಮಸ್ಯೆ ಆದರೂ ಸದಾಕಾಲ ನನ್ನ ಮನೆ ನಿಮಗೆ ತೆರೆದಿರುತ್ತದೆ ಜೊತೆಗೆ ನಾನು ನಿಮ್ಮೊಂದಿಗೆ ಇರುತ್ತೇನೆ ತಾವು ಭರವಸೆಯನ್ನ ಕಳೆದುಕೊಳ್ಳದೆ ಸುಂದರವಾಗಿ ಬದುಕುವ ಅವಕಾಶ ತಮ್ಮಲ್ಲಿಯೇ ಇದೆ ಆ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಸದಾ ಇರಲಿ ಎಂದು ಆಶಿಸುತ್ತೇನೆ.

ವಿಕಲಚೇತನ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಮರ್ಥನಂ ಅಂಗವಿಕಲ ಸಂಸ್ಥೆಯ ಸರ್ವ ಪದಾಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.

# ವಿಕಲಾಂಗ ಚೇತನರಿಗೆ ಸಮಾಜ ಸ್ಪಂದಿಸಲಿ




■ **ವಿಜಯಸಾಕ್ಷಿ ಸುದ್ದಿ, ಧಾರವಾಡ**

ವಿಕಲಾಂಗ ಚೇತನರು ಈ ಸಮಾಜದ ಆಸ್ತಿ. ಅವರಿಗೆ ಎಲ್ಲ ರೀತಿಯ ಗೌರವ, ಸ್ಪಂದನೆ ಸಮಾಜದಿಂದ ಹೆಚ್ಚೆಚ್ಚು ಸಿಗಬೇಕಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಧಾರವಾಡದ 'ಸಮರ್ಥನಂ' ಅಂಗವಿಕಲ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ವಿಕಲಾಂಗ ಚೇತನರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಈ ದಿನ ಜಗತ್ತಿನಾದ್ಯಂತ ವಿಕಲಚೇತನರ ಬಗ್ಗೆ ಚಿಂತನ-ಮಂಥನ ನಡೆಸುವುದರೊಂದಿಗೆ ಅವರನ್ನು ಸಮಾಜದ ಮುಂಚೂಣಿಯಲ್ಲಿ ತರುವುದಕ್ಕಾಗಿ ಹತ್ತಾರು ಯೋಜನೆಗಳನ್ನ ರೂಪಿಸಲಾಗುತ್ತಿದೆ. ಪ್ರತಿಯೊಂದು ದೇಶವೂ ಈ ವ್ಯಕ್ತಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವರನ್ನು ಸಮರ್ಥರನ್ನಾಗಿ ಸಮುದಾಯದಲ್ಲಿ ಬಿಂಬಿಸುವ ಜೊತೆಗೆ ಅವರು ತಮ್ಮ ತಮ್ಮ ಬದುಕನ್ನು ಕಟ್ಟಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಾ ಬಂದಿದೆ. ಇದರ ಸದುಪಯೋಗವನ್ನು ವಿಕಲಚೇತನರು ಪಡೆದುಕೊಳ್ಳಬೇಕು.

ಆ ದೇವರು ನಿಮಗೆ ವಿಶೇಷ ವ್ಯಕ್ತಿತ್ವವನ್ನು, ಬುದ್ಧಿ, ಸಾಮರ್ಥ್ಯವನ್ನು ನೀಡಿರುತ್ತಾನೆ. ಜಗತ್ತಿನ ಬಹುತೇಕ ವಿಕಲಚೇತನ ಸಾಧಕರ ಬದುಕು ಅವರ ಸಾಧನೆ ಹಾದಿಯನ್ನು ತಾವು ಅರಿತುಕೊಳ್ಳಬೇಕು. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿಮಗೆ ಮುಕ್ತವಾಗಿ ಭಾಗವಹಿಸಲು ಸಮಾಜ ಅವಕಾಶ ಕಲ್ಪಿಸಿದೆ. ವಿಶೇಷ ತರಬೇತಿ ಪಡೆದು ಸಾಧನೆಯನ್ನು ಮಾಡಿ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವಿಕಲಚೇತನ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಮರ್ಥನಂ ಸಂಸ್ಥೆಯ ಸರ್ವ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಿಕಲಾಂಗ ಚೇತನರಿಗೆ ಸಮಾಜ ಸದಾ ಸ್ಪಂದಿಸಬೇಕು




**ಧಾರವಾಡ** : ವಿಕಲಾಂಗ ಚೇತನರು ಈ ಸಮಾಜದ ಆಸ್ತಿ ಅವರಿಗೆ ಎಲ್ಲ ರೀತಿಯ ಗೌರವ ಸ್ಪಂದನೆ ಸಮಾಜದಿಂದ ಹೆಚ್ಚೆಚ್ಚು ಸಿಗಬೇಕಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಧಾರವಾಡದ ಸಮರ್ಥನಂ ಅಂಗವಿಕಲ ಸಂಸ್ಥೆಯ ವತಿಯಿಂದ ಏರ್ಪಡಿಸಿದ ಅಂತರಾಷ್ಟ್ರೀಯ ವಿಕಲಾಂಗ ಚೇತನರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಕಲಚೇತನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಡಿಸೆಂಬರ್ ಮೂರನ್ನು ಅಂತಾರಾಷ್ಟ್ರೀಯ ವಿಕಲಾಂಗ ವ್ಯಕ್ತಿಗಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಈ ದಿನ ಇಡೀ ಜಗತ್ತಿನಾದ್ಯಂತ ವಿಕಲಚೇತನರ ಬಗ್ಗೆ ಚಿಂತನ ಮಂಥನ ನಡೆಯುವುದರ ಜೊತೆಗೆ ಅವರನ್ನು ಸಮಾಜದ ಮುಂಚೂಣಿಯಲ್ಲಿ ತರುವುದಕ್ಕಾಗಿ ಹತ್ತಾರು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಪ್ರತಿಯೊಂದು ದೇಶಗಳು ಈ ವ್ಯಕ್ತಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವರನ್ನು ಸಮರ್ಥರನ್ನಾಗಿ ಸಮುದಾಯದಲ್ಲಿ ಬಿಂಬಿಸುವ ಜೊತೆಗೆ ಅವರು ತಮ್ಮ ಬದುಕನ್ನು ಕಟ್ಟಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಾ ಬಂದಿದೆ. ಇದರ ಸದುಪಯೋಗವನ್ನು ವಿಕಲಚೇತನರು ಮಾಡಿಕೊಳ್ಳಬೇಕು. ನಿಮ್ಮ ಜೊತೆ ಸಮಾಜ ನಾವು ಸದಾ ಇರುತ್ತೇವೆ. ನಿಮಗೆ ಯಾವುದೇ ಕೀಳರಿಮೆ ಬೇಡ. ಆ ದೇವರು ನಿಮಗೆ ವಿಶೇಷ ವ್ಯಕ್ತಿತ್ವವನ್ನು ಬುದ್ಧಿಯನ್ನು ಸಾಮರ್ಥ್ಯವನ್ನು ನೀಡಿರುತ್ತಾನೆ. ಜಗತ್ತಿನ ಬಹುತೇಕ ವಿಕಲಚೇತನ ಸಾಧಕರ ಬದುಕು ಅವರ ಸಾಧನೆ ಹಾದಿಯನ್ನು ತಾವು ಅರಿತುಕೊಳ್ಳಬೇಕು. ಅವರು ಸಾಗಿ ಬಂದ ಹೆಜ್ಜೆ ಗುರುತುಗಳನ್ನು ತಾವೊಮ್ಮೆ ಮೆಲಕು ಹಾಕಬೇಕು. ಆವಾಗ ತಮಗೂ ಉತ್ತಮ ಬದುಕನ್ನು ಕಟ್ಟಿಕೊಳ್ಳುವ ಕನಸುಗಳು ಬೀಳುತ್ತವೆ. ಇಂತಹ ಕನಸನ್ನು ಕಾಣುವ ಬೀಜವನ್ನು ಸಮಾಜ ಬಿತ್ತಬೇಕಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿಮಗೆ ಮುಕ್ತವಾಗಿ ಭಾಗವಹಿಸಲು ಸಮಾಜ ಅವಕಾಶ ಕಲ್ಪಿಸಿದೆ. ತಾವು ವಿಶೇಷ ತರಬೇತಿ ಪಡೆದು ಸಾಧನೆಯನ್ನು ತಾವು ಮಾಡಿ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ತಮ್ಮ ಸತತ ಪ್ರಯತ್ನ ಆಸಕ್ತಿ ಸಹ ಮುಖ್ಯ ಎಂದು ಹೇಳಿದರು. ತಮಗೆ ಏನೇ ಸಮಸ್ಯೆ ಆದರೂ ಸದಾಕಾಲ ನನ್ನ ಮನೆ ನಿಮಗೆ ತೆರೆದಿರುತ್ತದೆ ಜೊತೆಗೆ ನಾನು ನಿಮ್ಮೊಂದಿಗೆ ಇರುತ್ತೇನೆ ತಾವು ಭರವಸೆಯನ್ನ ಕಳೆದುಕೊಳ್ಳದೆ ಸುಂದರವಾಗಿ ಬದುಕುವ ಅವಕಾಶ ತಮ್ಮಲ್ಲಿಯೇ ಇದೆ. ಆ ನಿಟ್ಟಿನಲ್ಲಿ ತಮ್ಮ ಪ್ರಯತ್ನ ಸದಾ ಇರಲಿ ಎಂದು ಆಶಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ವಿಕಲಚೇತನ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಮರ್ಥನಂ ಅಂಗವಿಕಲ ಸಂಸ್ಥೆಯ ಸರ್ವ ಪದಾಧಿಕಾರಿಗಳು ಮುಂತಾದವರು ಉಪಸ್ಥಿತರಿದ್ದರು.